ಆಶ್ರಯ ಯೋಜನೆ.

4202(4523) ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು) :— ಮಾನ್ಯ ಮಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕಮಗಳೂರು ಜಿಲ್ಲೆಗೆ 2000-2001ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು?

ಆ) ಅದರಲ್ಲಿ ಚಿಕ್ಕಮಗಳೂರು ಜಿಲ್ಲೆಯ 6 ವಿಧಾನ ಸಭಾ ಕ್ಷೇತ್ರಗಳಿಗೆ ಎಷ್ಟು ಎಷ್ಟು ಆಶ್ರಯ ಮನೆಗಳ ಗುರಿ ನಿಗಧಿಪಡಿಸಲಾಗಿದ.

ಇ) ಗುರಿ ನಿಗಧಿಪಡಿಸುವಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಈ ಅನ್ಯಾಯ ಸರಿಪಡಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಖಮರುಲ್ ಇಸ್ಲಾಂ (ಮಸತಿ ಸಚಿವರು) :—

ಅ) ಗ್ರಾಮೀಣ ನಗರ
3537 387

ಆ) ಚಿಕ್ಕಮಗಳೂರು ಜಿಲ್ಲೆಗೆ ಗುರಿಗಳನ್ನು ತಾಲ್ಲೂಕುವಾರು ಈ ಕೆಳಕಂಡಂತೆ ನೀಡಲಾಗಿದೆ.

ಅ) ಕ್ರ.ಸಂ	ತಾಲ್ಲೂಕು	ಗ್ರಾಮೀಣ	ನಗರ
1	ಚಿಕ್ಕಮಗಳೂರು	507	57
2	ಕಡೂರು	505	55
3	ಕೊಪ್ಪ	505	55
4	ಮೂಡಿಗೆರೆ	505	55
5	ನರಸಿಂಹರಾಜಪುರ	505	55
6	ಶೃಂಗೇರಿ	505	55
7	ತರೀಕೆರೆ	505	55
	ಒಟ್ಟು	3537	387

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.